# ತರಚುಗಾಯುವ ಕೆರೆದು...

**ಕೆ**ಲವರಿರುತ್ತಾರೆ: ಮೈಮೇಲೆ ಎಲ್ಲಿಯಾದರೂ ಒಂದು ಚಿಕ್ಕ ಗಾಯವಿದ್ದರೆ, ಅದನ್ನು ಕೆರೆದುಕೊಳ್ಳುತ್ತಾ ಚಿಕ್ಕದನ್ನು ದೊಡ್ಡದನ್ನಾಗಿ ಮಾರ್ಪಡಿಸಿಕೊಳ್ಳುವುದು ಅವರ ಅಭ್ಯಾಸ. ವಿಪರೀತ ಕೆಲಸದ ಒತ್ತಡವಿದ್ದಾಗಲೋ, ಯಾವುದೋ ಚಿಂತೆ ಕೊರೆಯುತ್ತಿದ್ದಾಗಲೋ, ಇಲ್ಲವೇ ಮಾಡಲು ಏನೂ ಕೆಲಸ ಇಲ್ಲದಿದ್ದಾಗಲೋ ಅಂಥವರ ಕೈ ಸುಮ್ಮನಿರುವುದೇ ಇಲ್ಲ. ಪರಿಣಾಮವೆಂದರೆ, ಕೇವಲ ತರಚುವಿಕೆಯಿಂದಾದ ಚಿಕ್ಕಗಾಯ, ಅದೂ ಮಾಯುವ ಹಂತದಲ್ಲಿದ್ದಾಗ– ಕೆರೆದೂ ಕೆರೆದು ದೊಡ್ಡ ವ್ರಣವಾಗಿ ಬದಲಾಯಿಸುವಂತಾಗುತ್ತದೆ. ಕೆರೆದುಕೊಳ್ಳುವುದು– ಮನುಷ್ಯನೂ ಸೇರಿದಂತೆ, ಎಲ್ಲ ಪ್ರಾಣಿಗಳಿಗೂ ಪ್ರಕೃತಿಯಿಂದ ದತ್ತವಾಗಿ ಬಂದಿರುವ ಒಂದು ಕ್ರಿಯೆ. ನವೆಯಾದಾಗ ತುರಿಸಿಕೊಳ್ಳುತ್ತಿದ್ದರೆ ಒಂದು ಬಗೆಯ ತಾಮಸ ಸುಖದ ಅನುಭವವಾಗುತ್ತದೆ. ಇಂಥ ಅನುಭವವನ್ನು ಮತ್ತೆ ಮತ್ತೆ ಪಡೆಯಬೇಕೆನ್ನುವ ಆದಿಮ ಪ್ರವೃತ್ತಿ ಎಲ್ಲರಲ್ಲೂ ಇರುತ್ತದೆ. ಕೆಲವರು ಅದನ್ನು ಪ್ರಜ್ಞಾಪೂರ್ವಕ ದೂರ ಮಾಡುತ್ತಾರೆ. ಇನ್ನು ಕೆಲವರಿಗೆ ಅದು ಸಾಧ್ಯವಾಗುವುದೇ ಇಲ್ಲ.

ಇದು ದೇಹದ ಮಾತಾಯಿತು. ಅಂತರಂಗದಲ್ಲೂ ಇಂಥದೇ ಪ್ರಕ್ರಿಯೆ ನಡೆಯುತ್ತಿರುತ್ತದೆ. ಮನುಷ್ಯರಾಗಿ ಹುಟ್ಟಿದ ಮೇಲೆ ಬದುಕಿನಲ್ಲಿ ಅನೇಕ ಕಹಿಘಟನೆಗಳು ಕಾಣಿಸಿಕೊಂಡು ಮನಸ್ಸನ್ನು ಘಾಸಿಗೊಳಿಸಿರುತ್ತವೆ. ಯಶಸ್ಸಿನ ಮಾರ್ಗದಲ್ಲಿ ಕಾಣಿಸಿಕೊಳ್ಳುವ ಅಡಚಣೆ, ಯಾವುದೋ ಸಂದರ್ಭದಲ್ಲಿ ಎದುರಾಗುವ ಅಪಮಾನ ಪ್ರಸಂಗ, ಪ್ರಣಯ ವೈಫಲ್ಯ, ಬಡತನ, ದೈಹಿಕ ತೊಂದರೆಗಳು, ಹೀಗೆ ಹತ್ತು ಹಲವು ಸಂಗತಿಗಳು ಮನಸ್ಸಿನ ಗಾಯಕ್ಕೆ ಕಾರಣವಾಗಬಹುದು. ಆದರೆ ಅಂಥ ಕಷ್ಟದ ಘಟ್ಟಗಳನ್ನು ದಾಟಿ ಬಂದ ನಂತರವೂ ನಾವು ಕಳೆದುಹೋದ ದಿನಗಳ ನೋವನ್ನು ಪದೇ ಪದೇ ನೆನಪು ಮಾಡಿಕೊಳ್ಳುತ್ತಿರುತ್ತೇವೆ. ಕಹಿ ನೆನಪುಗಳನ್ನು ಸದಾಕಾಲ ಹಸಿರಾಗಿ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತೇವೆ. ಮರವೆಯತ್ತ ಸರಿಯುತ್ತಿದ್ದ ಘಟನೆಗಳನ್ನು ಪಾತಾಳಗರಡಿ ಹಾಕಿ, ಮನಸ್ಸಿನಾಳದಿಂದ ಮೇಲಕ್ಕೆ ತಂದುಕೊಂಡು ಮೆಲುಕು ಹಾಕುತ್ತಿರುತ್ತೇವೆ. ಇನ್ನೊಬ್ಬರಿಗೆ ಅಂಥವನ್ನು ಮತ್ತೆ ಮತ್ತೆ ಹೇಳುವುದರ ಮೂಲಕವೋ, ಮನಸ್ಸಿನಲ್ಲಿ ಸದಾ ಅವುಗಳನ್ನೇ ಧ್ಯಾನಿಸುತ್ತಿರುವುದರ ಮೂಲಕವೋ ಮಾಯುತ್ತಿರುವ ಚಿಕ್ಕ ಗಾಯವನ್ನು ಕೆದಕಿ, ಜೊತೆಗೆ ಇನ್ನಷ್ಟನ್ನೂ ಸೇರಿಸಿಕೊಂಡು, ದೊಡ್ಡ ವ್ರಣವನ್ನಾಗಿ ಪರಿವರ್ತಿಸಿಕೊಂಡು 'ಸುಖಿಸುತ್ತೇವೆ.' ಇದನ್ನೇ ಡಿ.ವಿ.ಜಿ. 'ಕಪಿ ಬುದ್ಧಿ' ಎಂದಿರುವುದು. ಕಗ್ಗದಲ್ಲಿನ ಒಂದು ಪದ್ಯ ಹೀಗಿದೆ:

ತರಚು ಗಾಯವ ಕೆರೆದು ಹುಣ್ಣನಾಗಿಪುದು ಕಪಿ  
ಕೊರತೆಯೊಂದನು ನೀನು ನೆನೆನೆನೆದು ಕೆರಳಿ  
ಧರೆಯೆಲ್ಲವನು ಶಪಿಸಿ, ಮನದಿ ನರಕವ ನಿಲಿಸಿ  
ನರಳುವುದು ಬದುಕೇನೊ? –ಮಂಕುತಿಮ್ಮ॥

ಗತಕಾಲದ ನೋವಿನ ನೆನಪುಗಳಿಂದ ನಾವು ವರ್ತಮಾನದಲ್ಲಿ ಲಭ್ಯವಾಗಿರುವ ನೆಮ್ಮದಿಯಿಂದಲೂ ವಂಚಿತರಾಗುತ್ತೇವೆ; ಅರ್ಥಾತ್ ಬದುಕು ನಿತ್ಯ ನರಕವಾಗಿ ಮಾರ್ಪಡುತ್ತದೆ. ಅದೂ ಅಲ್ಲದೆ, ನಮ್ಮ ಒಳಗುದಿಯನ್ನು ನಾವು ನಮ್ಮೊಳಗೇ ಅಡಗಿಸಿಕೊಳ್ಳುವುದಿಲ್ಲ, ಇನ್ನೊಬ್ಬರೊಂದಿಗೆ ಹಂಚಿಕೊಳ್ಳಲು ಪ್ರಯತ್ನಿಸುತ್ತೇವೆ. ಅದರಿಂದ ನಮ್ಮ ಪಿಡುಗು ಅವರಿಗೂ ಅಂಟಿಕೊಳ್ಳುವಂತಾಗುತ್ತದೆ, ಹೀಗಾಗಿ ನಾವು ಅಸುಖಿಗಳಾಗಿರುವುದರ ಜೊತೆಗೆ, ನಾವು ಇತರರನ್ನು ಅಸುಖಿಗಳನ್ನಾಗಿ ಮಾಡುತ್ತೇವೆ. ಇದನ್ನು ಜಲಮಾಲಿನ್ಯ, ವಾಯುಮಾಲಿನ್ಯ– ಇಂಥ ಮಾಲಿನ್ಯಗಳ ಜೊತೆಗೆ ಸೇರಿಸಬಹುದಾದ 'ಭಾವ ಮಾಲಿನ್ಯ' ಎಂದು ಕರೆಯಬಹುದೇನೋ.

ಇದಕ್ಕೆ ಪರಿಹಾರವೆಂದರೆ, ನೋವು ಬಂದಾಗ ಸಹಿಸಿಕೊಂಡು, ಆ ಘಟ್ಟ ಕಳೆದ ನಂತರ ಆ ನೋವಿನ ಕ್ಷಣವನ್ನೂ ಸಂಪೂರ್ಣವಾಗಿ ಮರೆತುಬಿಡಲು ಪ್ರಯತ್ನಿಸುವುದು; ಎಲ್ಲರ ಬದುಕಿನಲ್ಲೂ ನಡೆಯುವಂಥಾದ್ದು, ನನಗೂ ಆಗಿದೆ, ನಾನೇನೂ ಸರ್ವಶ್ರೇಷ್ಠನಲ್ಲ; ನಾನೊಬ್ಬನೇ ಭೂಮಿಯ ಮೇಲಿರುವ ಅಸುಖಿಯಲ್ಲ– ಎಂದು ಸಮಾಧಾನ ತಂದುಕೊಳ್ಳುವುದು; ಅತೃಪ್ತಿ, ದ್ವೇಷ, ಸೇಡು, ದುರಾಶೆ– ಇಂಥ ವಿಕಾರಗಳಿಂದ ದೂರವಿರುವುದು. ವಿವೇಕಿಯಾದವನು ಈ ನಿಟ್ಟಿನಲ್ಲಿ ಪ್ರಯತ್ನಿಸಿ, 'ತರಚು ಗಾಯವನ್ನು ಕೆರೆದು ಹುಣ್ಣು ಮಾಡಿಕೊಳ್ಳುವ' ಕಪಿ ವೃತ್ತಿಯನ್ನು ದೂರವಿರಿಸುತ್ತಾನೆ.

■ ವೈನತೇಯ

---

# ಮಾತೇ ಮುತ್ತು

★ ಉತ್ತಮ ಅಭಿರುಚಿಗಳನ್ನು ಕಳೆದುಕೊಳ್ಳುವ ಜತೆಗೆ ನಾನು ಸಂತೋಷವನ್ನೂ ಕಳೆದುಕೊಂಡಿದ್ದೇನೆ. ಇದರಿಂದ ಬಹುಶಃ ನನ್ನ ಬೌದ್ಧಿಕ ಸಾಮರ್ಥ್ಯ ಕುಗ್ಗಿದೆ. ಇದು ಶೀಲವನ್ನು, ನೈತಿಕತೆಯನ್ನು ಕುಗ್ಗಿಸುತ್ತದೆ.

-ಚಾರ್ಲ್ಸ್ ಡಾರ್ವಿನ್

★ ವರ್ತಮಾನದ ಸಮಸ್ಯೆಗೆ ಗತಕಾಲ ಕಾರಣವಾಗಿದ್ದರೆ, ಅದರ ನಿಜಸ್ವರೂಪ ಶೋಧಿಸಿ ಸಮಾಜದಲ್ಲಿ ಸರಿಯಾದ ವಿವೇಕ ಮೂಡಿಸುವುದು ಸಂಶೋಧನೆಯ ಕರ್ತವ್ಯ.

-ಎಂ.ಎಂ.ಕಲಬುರ್ಗಿ

★ ಒಪ್ಪಿಕೊಂಡ ಕೆಲಸ ಹೇಗೆ ಮಾಡಬೇಕೆಂದರೆ ಹರಕೆ ಹೊತ್ತವರ ಹಾಗೆ ತದೇಕಚಿತ್ತ ಹಾಗೂ ಶ್ರದ್ಧೆಯಿಂದ ಮಾಡಬೇಕು.

-ಟಿ.ವಿ.ವೆಂಕಟಾಚಲಶಾಸ್ತ್ರಿ

★ ಒಂದು ಒಳ್ಳೆಯ ಪುಸ್ತಕವನ್ನು ನಾಶಮಾಡುವುದೆಂದರೆ ಒಬ್ಬ ಮನುಷ್ಯನನ್ನು ಕೊಂದಂತೆಯೇ. ಮನುಷ್ಯನನ್ನು ಕೊಲ್ಲುವುದೆಂದರೆ ದೇವರ ಪ್ರತಿರೂಪವಾದ ಜೀವಿಯನ್ನು ಕೊಂದಂತೆ.

-ಜಾನ್ ಮಿಲ್ಟನ್

★ ಸಂಗೀತ ಹ್ಯಂಗ ಅಂದರ ನಾನು ನನ್ನನ್ನ ಮರೀಬೇಕು ಹಂಗ ಹಾಡಬೇಕು. ಇನ್ನು ನಾಟಕ– ನಾನು ನನ್ನನ್ನು ಮರೀಬೇಕು ಹಂಗ ಮಾಡಬೇಕು.

-ಸಿದ್ದೇಶ್ವರ ಸ್ವಾಮಿಗಳು

★ ಎಳೆಯರಾಗಿರುವಾಗಲೇ ನಮ್ಮಲ್ಲಿ ಜ್ಞಾನಲಾಲಸೆ ಬೆಳೆದರೆ ಮುಂದಿನ ದಾರಿ ಸುಲಭ. ಆದರೆ ಮಕ್ಕಳು ಪಠ್ಯಪುಸ್ತಕದ ಹೊರಗೆ ಇಣುಕಿ ನೋಡುವ ಅವಕಾಶಗಳೇ ಇಲ್ಲ! ಅವರಿಗಾಗಿ ಕತೆಗಳಾದರೂ ಎಷ್ಟಿವೆ? ಉಳಿದ ವಿಷಯಗಳಲ್ಲಿ ಪುಸ್ತಕಗಳಿವೆಯೇ?

-ಶಿವರಾಮ ಕಾರಂತ

★ ನಮ್ಮೆಲ್ಲ ಸಾಮಾಜಿಕ ಶಕ್ತಿಯೂ ಜನತೆಯಿಂದ ದೊರೆತದ್ದು. ಯಾವುದೇ ಒಂದು ವರ್ಗ ಅಥವಾ ವ್ಯಕ್ತಿ ಬಯಸುವ ವಿಶೇಷಾಧಿಕಾರವನ್ನು ಸಮಾಜವು ಒಪ್ಪದಿದ್ದರೆ ಆ ಅಧಿಕಾರಕ್ಕೆ ಬೆಲೆಯೇ ಇಲ್ಲ.

-ಬಿ.ಆರ್.ಅಂಬೇಡ್ಕರ್

★ ವಿನೋದದ ಅಂಶವಿಲ್ಲದ ಪ್ರೇಮ ಪ್ರೇಮವಲ್ಲ; ಹಾಗೆಯೇ ಹುಚ್ಚಿನ ಅಂಶವಿಲ್ಲದ ಪ್ರೇಮ ಕೂಡ ಸಪ್ಪೆಯಾದುದು.

-ಪಿ.ಲಂಕೇಶ್

★ ಕಳವು ಮಾಡಲು ಅವಕಾಶ ಸಿಗದವರೆಲ್ಲರೂ ಅನಿವಾರ್ಯ ಪ್ರಾಮಾಣಿಕರು!

-ಮುನಿಶ್ರೀ ತರುಣ ಸಾಗರ್‌ಜಿ

★ ಪ್ರೇಮದಿಂದ ಶೋಕ ಹುಟ್ಟುವುದು, ಪ್ರೇಮದಿಂದ ಭಯ ಹುಟ್ಟುವುದು. ಪ್ರೇಮದಿಂದ ಬಿಡುಗಡೆ ಆದವನಿಗೆ ಶೋಕವಿಲ್ಲ; ಭಯವಿಲ್ಲ.

-ಗೌತಮ ಬುದ್ಧ

★ ಪ್ರೇಮ ಸಂಚಾರವಿಲ್ಲದ ಹೃದಯವೇ ಮಸಣ.

-ಕಬೀರ

★ ಬೇಡಿ ಪಡೆದ ಪ್ರೇಮ ಒಳ್ಳೆಯದು; ಬೇಡದೆಯೇ ಬಂದದ್ದು ಇನ್ನೂ ಒಳ್ಳೆಯದು.

-ಶೇಕ್ಸ್‌ಪಿಯರ್

★ ಕೊನೆಯಿಲ್ಲದ ಪ್ರೇಮದಾಟದಲ್ಲಿ ತೊಡಗಿ ಅದಕ್ಕಾಗಿ ಬದುಕುವ ಅಗತ್ಯ ಇದೆಯೇ? ಪ್ರೇಮ ಎಂದರೆ ಮಕ್ಕಳಾಡುವ ಸಂಸಾರದಾಟ! ಒಂದು, ಎರಡು ಅಥವಾ ಹತ್ತು ಬಾರಿ ಆಡಿ ಆನಂದಿಸಬಹುದು. ಆದರೆ ಸದಾಕಾಲ ಆಡುವಷ್ಟು ಪ್ರೇಮ ಬೆಲೆಯುಳ್ಳದ್ದೇ!?

-ಹರ್ಮನ್ ಹೆಸ್